# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 18-08-2022

## ಜನವಾಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 83/2022 ಕಲಂ 32(3) 15(ಎ) ಕೆ.ಇ. ಕಾಯ್ದೆ :-

ದಿನಾಂಕ: 17/08/2022 ರಂದು ಮಧ್ಯಾಹ್ನ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ವಿಳಾಸಪೂರಗ್ರಾಮದ ಮಹಾದೇವ ಮಂದಿರದ ರೋಡಿಗೆ ಇರುವ ಒಂದು ಕಿರಾಣಾ ಅಂಗಡಿಯ ಮುಂದುಗಡೆ ಅಂಗಡಿಯ ಮಾಲೀಕ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಅನುವು ಮಾಡಿಕೊಡುತ್ತಿದ್ದಾನೆ ಅಂತ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ದಾಳಿ ಮಾಡಿ ಹಿಡಿದುಕೊಂಡಿದ್ದು, ಸರಾಯಿ ಕುಡಿಯುತ್ತಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ಸದರಿಯವನಿಗೆ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಈತ ತನ್ನ ಹೆಸರು ದಯಾನಂದ ತಂದೆ ಪಾಂಡುರಂಗ ಮನ್ನಾಜಿ ವಯ: 35 ವರ್ಷ ಉ: ಕಿರಾಣಾ ಅಂಗಡಿ ಜಾ: ಮರಾಠಾ ಸಾ: ವಿಳಾಸಪೂರ ಗ್ರಾಮ ಅಂತ ತಿಳಿಸಿದ್ದು ತಾನು ಕಿರಾಣಾ ಅಂಗಡಿಯ ಮಾಲೀಕನಿರುವುದಾಗಿ ತಿಳಿಸಿರುತ್ತಾನೆ. ಸ್ಥಳ ಪರಿಶೀಲಿಸಿ ನೋಡಲಾಗಿ ಅಂಗಡಿಯ ಮುಂದುಗಡೆ ಕಟ್ಟೆಯ ಮೇಲೆ 180 ಎಂ.ಎಲ್.ನ ಒಲ್ಡ್ ಟವೇರನ್ ವಿಸ್ಕಿ ಹೆಸರಿನ 4 ಸರಾಯಿ ತುಂಬಿರುವ ಪೌಚ್ಗಳು ಒಂದರ ಅ.ಕಿ. 86/- ರೂಪಾಯಿಯಂತೆ ಒಟ್ಟು 344/- ರೂಪಾಯಿ ಬೆಲೆಯುಳ್ಳದ್ದು, ಮತ್ತು ಸರಾಯಿ ಕುಡಿದು ಖಾಲಿ ಮಾಡಿರುವ 180 ಎಂ.ಎಲ್.ನ ಒಲ್ಡ್ ಟವೇರನ್ ವಿಸ್ಕಿ 2 ಖಾಲಿ ಪೌಚ್ಗಳು, ಮತ್ತು ಸರಾಯಿ ಕುಡಿಯಲು ಉಪಯೋಗಿಸಿದ 2 ಪ್ಲಾಸ್ಟಿಕ್ ಗ್ಲಾಸ್ಗಳು ಹಾಗು ಒಂದು ಪ್ಲಾಸ್ಟಿಕ್ ಮಗ್ ಇವೆಲ್ಲವುಗಳನ್ನು ಒಂದು ಪ್ಲಾಸ್ಟಿಕ್ ಕ್ಯಾರಿಬ್ಯಾಗದಲ್ಲಿ ಹಾಕಿ, ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 145/2022 ಕಲಂ 78, 80 ಕೆಪಿ ಕಾಯ್ದೆ :-

ದಿನಾಂಕ 17/08/2022 ರಂದು ಪಿಎಸ್ಐ ರವರು ಠಾಣೆಯಲ್ಲಿದ್ದಾಗ 1800 ಗಂಟೆಗೆ ಬೀದರ ಕೇಂದ್ರ ಬಸ ನಿಲ್ದಾಣದ ಬಳಿಯ ದಿಲಾರಾಮ ಲಾಡ್ಜನ ರೂಮ್ ನಂ-302 ನೇದ್ದರಲ್ಲಿ 03-04 ಜನರು ಜೂಜಾಟ ಆಡುತ್ತಿದ್ದಾರೆ ಅಂತ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಒಟ್ಟು 03 ಜನರು ಗೋಲಾಗಿ ಕುಳಿತು ಹಣ ಹಚ್ಚಿ ಪಣ ತೋಟ್ಟು ಅಂದರ್-ಬಾಹರ್ ಎಂಬ ನಸೀಬಿನ ಇಸ್ಪಿಟ್ ಆಟ ಆಡುತ್ತಿದ್ದನ್ನು ನೋಡಿ ಖಚಿತಪಡಿಸಿಕೊಂಡು ದಾಳಿ ಮಾಡಿ ಇಸ್ಪಿಟ್ಟು ಆಡುತ್ತಿದ್ದ ಜನರಿಗೆ ಹಿಡಿದು ಅವರ ಅಂಗ ಜಡ್ತಿ ಮಾಡಲಾಗಿ ಮತ್ತು ಅವರ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ 1)ಲೋಕೇಶ ತಂದೆ ರಾಜಕುಮಾರ ಬಿರಾದಾರ,, 32 ವರ್ಷ, ಜಾತಿ-ಲಿಂಗಾಯತ, ಉದ್ಯೋಗ-ಗುತ್ತೆದಾರರು, ಸಾ-ಕೌಠಾ(ಕೆ), ತಾ-ಔರಾದ, ಇವರ ಅಂಗ ಜಡ್ತಿ ಮಾಡಲಾಗಿ ರೂ-530/- ಗಳು ಸಿಕ್ಕಿರುತ್ತವೆ. 2)ಸುರೇಶ ತಂದೆ ಶಿವರಾಜ ಕನ್ನಾಳೆ, 34 ವರ್ಷ , ಲಿಂಗಾಯತ, ಉದ್ಯೋಗ-ಒಕ್ಕಲುತನ, ಸಾ- ಡೋಣಗಾಪುರ, ತಾ-ಭಾಲ್ಕಿ ಇವರ ಅಂಗ ಜಡ್ತಿ ಮಾಡಲಾಗಿ ರೂ-860/- ಗಳು ಸಿಕ್ಕಿರುತ್ತವೆ. 3)ಶಾಮಣ್ಣಾ ತಂದೆ ಶೇಂಕ್ರೆಪ್ಪ ಸೋರಳ್ಳಿ, 68 ವರ್ಷ, ಜಾತಿ-ಲಿಂಗಾಯತ, ಉದ್ಯೋಗ-ಕೆ.ಎಸ್.ಆರ್.ಟಿ.ಸಿ ನಿವೃತ ನೌಕರ ಸಾ-ಮನೆ ನಂ-333/1/119 ಶಿವನಗರ ಉತ್ತರ ಬೀದರ, ಇವರ ಅಂಗ ಜಡ್ತಿ ಮಾಡಲಾಗಿ ರೂ-700/- ಗಳು ಸಿಕ್ಕಿರುತ್ತವೆ. ಎಲ್ಲರ ಮಧ್ಯದಲ್ಲಿ ಆಟಕ್ಕೆಂದು ಹಾಕಿರುವ ರೂ. 2550/- ಹೀಗೆ ಎಲ್ಲಾ ಸೇರಿ ಒಟ್ಟು ನಗದು ಹಣ ರೂ. 4640/- ಹಾಗೂ 52 ಇಸ್ಪೀಟು ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಮುಡಬಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 62/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 16/08/2022 ರಂದು 1500 ಗಂಟೆಯ ಸುಮಾರಿಗೆ ಸಿಪಿಐ ರವರು ವೃತ್ತ ಕಛೇರಿಯಲ್ಲಿದ್ದಾಗ ಫೋನ್ ಮುಖಾಂತರ ಹಿರನಾಗಾಂವ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ಅಂಬೇಡ್ಕರ ಚೌಕ ಪಕ್ಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಜನರಿಂದ ಹಣ ಪಡೆದು ಮಟಕಾ ಬರೆದುಕೊಳ್ಳುತ್ತಿದ್ದಾನೆ ಅಂತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಹಿಡಿದು ಅವನ ಹೆಸರು ವಿಳಾಸ ವಿಚಾರಿಸಲಾಗಿ ಅವನು ತನ್ನ ರಾಜಕುಮಾರ ತಂದೆ ಮಲ್ಲಿಕಾರ್ಜುನ ಗಡಿಗಿ, ವಯಸ್ಸು:25 ವರ್ಷ, ಜಾತಿ:ಕಬ್ಬಲಿಗ, ಉದ್ಯೋಗ: ಕೂಲಿ ಕೆಲಸ, ಸಾ: ಹಿರನಾಗಾಂವ ಅಂತ ತಿಳಿಸಿದ್ದು, ಅವನ ಅಂಗ ಜಡ್ತಿ

ಮಾಡಲಾಗಿ ನಗದು ಹಣ 22000/-ರೂಪಾಯಿ, ಒಂದು ಮಟಕಾ ನಂಬರಗಳುಳ್ಳ ಚೀಟಿ ಹಾಗೂ ಒಂದು ಬಾಲ್ ಪೆನ್ ಸಿಕ್ಕಿದ್ದು, ಅವನ ಹತ್ತಿರ ಇದ್ದ ನಗದು ಹಣ 22000/-ರೂಪಾಯಿ, ಒಂದು ಮಟಕಾ ನಂಬರಗಳು ಚೀಟಿ ಹಾಗೂ ಒಂದು ಬಾಲ್ ಪೆನ್ ಗಳನ್ನು ಪಂಚರ ಸಮಕ್ಷಮ 16:30 ಗಂಟೆಯಿಂದ 17:30 ಗಂಟೆಯವರೆಗೆ ಜಪ್ತಿ ಪಂಚನಾಮೆ ಮೂಲಕ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.